ಕಾಲೇಜು ಹುಡುಗರನ್ನು ಕ್ಯಾಂಟೀನಿನಲ್ಲಿ ಕೂರಿಸಿಕೊಂಡು ಸಲಹೆ ಕೇಳಿದ್ದ.

'ಅಲ್ಲಿಗೇ ಹೋಗನ ನಡಿ.. ಅವತ್ತೇನು ಹೇಳಿದ್ದ... ಈಗೇನು ಮಾಡದು ಅಂತ ಹೇಳ್ತಾನೆ... ದಬಾಯ್ಸಿ ಕೇಳನ' ಎಂದು ಹೊರಟೇಬಿಟ್ಟಿದ್ದರು.

ಜಿಲ್ಲಾ ಪಂಚಾಯ್ತಿ ಆವರಣದಲ್ಲಿ ರಾಕೇಶನ ಹೈಸ್ಕೂಲ್ ಸಹಪಾಠಿಯಾಗಿದ್ದ, ಸ್ಥಳೀಯ ಪತ್ರಿಕೆಯ ವರದಿಗಾರ ಕೆಂಚೇಗೌಡ ಎದುರಾಗಿದ್ದ. 'ಏನಾ ಮಾರಾಯ ಈವತ್ತು ಮಂಡಿಗೆ ಹೋಗಿಲ್ವಾ. ಇದೇನು ಹುಡುಗ್ರ ದಂಡು ಕಟ್ಗಂಡು ಇಲ್ಲಿ ತಿರ್ಗಾಡ್ತಾ ಇದೀಯ... ಅಪರೂಪಕ್ಕೆ ಸಿಕ್ಕಿಯಾ ಬಾ ಟೀ ಕುಡಿಯೋಣ' ಎಂದು ಕ್ಯಾಂಟೀನ್ ಕಡೆ ಕರೆದುಕೊಂಡು ಹೋಗಿದ್ದ. ರಾಕೇಶ ತಮ್ಮ ಹೊಲದ ಕೃಷಿ ಹೊಂಡದ ಸಮಸ್ಯೆಯನ್ನೆಲ್ಲಾ ಹೇಳಿಕೊಂಡು 'ನೀನು ಸಿಕ್ಕಿದ್ದು ಒಳ್ಳೆದಾಯ್ತು. ಇದಕ್ಕೆ ಏನ್ ಮಾಡದು ಹೇಳು' ಎಂದಿದ್ದ.

'ಏನ್ ಮಾಡದು ಅಂತಿರಲ್ಲ ರಾಕೇಶಣ್ಣ... ಪಾಪದ ರೈತರನ್ನು ಹೊಂಡಕ್ಕೆ ಬೀಳ್ಸ ಕೆಲ್ಸ ಅಲ್ವಾ ಇದು. ಅವರಿಗೇನು ಸರ್ಕಾರ ಕೈ ತುಂಬಾ ಸಂಬಳ ಕೊಡದಿಲ್ವ... ಅದರ ಮೇಲೂ ಈ ಹೇಲ್ ತಿನ್ನ ಕೆಲ್ಸ ಮಾಡ್ತಾರಲ್ಲ, ನಡಿರಿ ಅವ್ನ ಯಾರು ನೋಡನ' ಕಾಲೇಜು ಹುಡುಗ ಕೆಂಚೇಗೌಡನಿಗೆ ಮಾತಾಡಲು ಬಿಡದೆ ಹೇಳಿದ್ದ.

'ಬರ್ಲಿ ತಡಿರಿ. ಅವಸರ ಬಿದ್ದು ಏನೂ ಮಾಡದ್ ಬ್ಯಾಡ. ನೀವ್ ತಿಳ್ಕಂಡಂಗೆ ಇಲ್ಲಿ ಹೊಡ್ಡಿದ್ದೆಲ್ಲಾ ಆ ಆಫೀಸರ್ ಒಬ್ನೇ ತಿನ್ನದಿಲ್ಲ. ಅವನ ಮೇಲೆ ಒಬ್ಬ ಬಾಸ್, ಶಾಸಕ, ಜಿಲ್ಲಾ ಮಂತ್ರಿ ಎಲ್ಲಾ ಇದಾರೆ. ಅವ್ರಿಗೆಲ್ಲಾ ಅವರ ಹುದ್ದೆಗನುಗುಣವಾಗಿ ಪಾಲ್ ತಲುಪಬೇಕು. ಇವ್ನಿಗೆ ತಿನ್ನಕೆ ಉಳಿಯದು ಏನಿದ್ರೂ ಸ್ವಲ್ಪನೇ...'

ಕೆಂಚೇಗೌಡನ ಮಾತಿನಿಂದ ಹುಡುಗರಿಗೆ ಸಮಾಧಾನವಾಗಲಿಲ್ಲ.

'ಅದೇನ್ ಮಾತಾಡ್ತೀರಿ ಬಿಡಿ ಅಣ್ಣ.. ನಮ್ಮ ಹಳ್ಳಿ ಕಡೆ ಹಿರಿಯರು ಹೇಳದಿಲ್ವ. ಕಡ್ಡೀಲಿ ತಗಂಡ್ ತಿಂದ್ರೂ ಹೇಲೆಯಾ, ಕೈಲಿ ಬಳ್ಕಂಡ್ ತಿಂದ್ರು ಹೇಲೆಯೇ ಅಂತವಾ... ಹಂಗೇ ಇದು... ನಡಿರಿ ಅವ್ನ ಹತ್ರಕ್ಕೆ ಹೋಗಿ ದಬ್ಬಾಯಿ ಕೇಳನ... ಇಂತವ್ರನೆಲ್ಲಾ ಹಿಡ್ದು ಅಲ್ಲಾಡುಸ್ದೇ ಹೋದ್ರೆ ರೈತರಿಗೆ ಉಳಿಗಾಲ ಇಲ್ಲ' ಮೊದಲು ಮಾತಾಡಿದ ಹುಡುಗನೇ ಕೆಂಡಕಾರಿದ್ದ.

'ಇರಿ ಇರಿ ಇದ್ರಲ್ಲಿ ಎಲ್ಲಾ ದೊಡ್ಡ ದೊಡ್ಡವ್ರ ಪಾಲುದಾರರು ಅಂತಾ ಹೇಳಿದ್ನಲ್ಲ... ಈ ಭ್ರಷ್ಟಾಚಾರ ಅನ್ನೋ ಹೆಮ್ಮರದ ಬೇರು ಬಹಳ ಆಳದಲ್ಲಿ ಹರಡಿಕೊಂಡಿದಾವೆ... ನೀವು ಹೋಗಿ ತುದಿ ಕೊಂಬೆ ಹಿಡಿದು ಅಲ್ಲಾಡಿಸಿದರೆ ಏನು ಬಂತು?... ಹೆಚ್ಚೂಂದ್ರೆ ಈ ಅಧಿಕಾರಿ ಇಲ್ಲಿಂದ ವರ್ಗಾ ಆಗಬಹುದು. ಕೆಲಕಾಲದ ನಂತರ ಮೇಲಿನವರು ಇಂತವನನ್ನೇ ಇನ್ನೊಬ್ಬನನ್ನು ಇಲ್ಲಿಗೆ ತಂದು ಪ್ರತಿಷ್ಠಾಪಿಸ್ತಾರೆ... ನಾನೂ ವರದಿ ಮಾಡಕೆ ಈ ಯೋಜನೆಯ ಎಲ್ಲಾ ವಿವರ ತೆಗೆದು ಇಟ್ಗಂಡಿದೀನಿ. ಅದು ನಮ್ಮ ಪೇಪರಲ್ಲಿ ಪ್ರಕಟನೂ ಆಗುತ್ತೆ... ಕೆಲವಾರು ಜನ ಅದನ್ನು ಓದಿ ಗುಸು ಗುಸು ಮಾತಾಡಿಕೊಳ್ತಾರೆ. ಆಮೇಲೆ ಮರೆತು ಬಿಡ್ತಾರೆ. ಆದರೆ, ದೊಡ್ಡ ದೊಡ್ಡವರ ಹೇಸಿಗೆ ಎಲ್ಲಾ ಮುಚ್ಚಾಕಿ ಅವರನ್ನು ಕಾಪಾಡೋಕೆ ಅಂತ್ಲೇ ರಾಜಧಾನಿಯಲ್ಲಿ ಅವರ ಕಡೆಯವೇ ದೊಡ್ಡ ದೊಡ್ಡ ಪತ್ರಿಕೆಗಳು, ಟಿವಿ ಚಾನಲ್ಗಳು ಇದಾವೆ...ಬರ್ಲಿ ರಾಕೇಶ, ಈಗ ನೀವ್ ಹೋಗಿರಿ, ನಾಳೆ ಜಿಲ್ಲಾ ಮಂತ್ರಿ ಸಭೆ ಇದ್ಯಂತೆ. ಅಧಿಕಾರಿ ಬೆಳಗ್ಗಿಂದ ಫೈಲ್‌ಗಳ ಹೊತ್ಗಂಡು ಬಾಸ್ ಛೇಂಬರ್ಗೆ ಓಡಾಡ್ತಾ ಅವ್ನೆ. ಟೈಮ್ ನೋಡ್ಕಂಡು ನಾನೇ ಹೋಗಿ, ಏನ್ಮಾಡ್ತಾನೆ ಅಂತ ವಿಚಾರಿಸಿ ನಿನಗೆ ಫೋನ್ ಮಾಡ್ತಿನಿ. ಆಮೇಲೆ ಬೇಕಾದ್ರೆ ಏನ್ಮಾಡದು ಅಂತ ನೀವೇ ತೀರ್ಮಾನ ಮಾಡಿರಂತೆ' ಎಂದು ಕೆಂಚೇಗೌಡ ರಾಕೇಶನಿಗೆ ಸಮಾಧಾನ ಮಾಡಿ ಕಳಿಸಿದ್ದ. ಅವನಿಗೆ ವಾಸ್ತವ ಸ್ಥಿತಿಯ ಅರಿವಿತ್ತು. ಅದರ ಮಧ್ಯದಲ್ಲೂ ಸ್ನೇಹಿತನಿಗೆ ನೆರವಾಗಬೇಕೆಂಬ ಹಂಬಲವಿತ್ತು. ಅಂದು ಸಂಜೆಯೇ ರಾಕೇಶ್‌ಗೆ ಫೋನ್ ಬಂದಿತ್ತು.

ನೀವು ಬಂದಿದ್ದ ವಿಷಯ ಎಲ್ಲ ಹೇಳಿದೆ. ಅವನು ಭಯಗೊಂಡಿದ್ದಾನೆ... ತಿನ್ನವ್ರು ಯಾರ್ ಯಾರೋ, ನೇರವಾಗಿ ಸಿಗಾಕಿಕೊಳ್ಳವ್ನು ನಾನು ನೋಡಿ... ನಿಮ್ಮವ್ರಿಗೆ ಇಲ್ಲೆಲ್ಲಾ ಬಂದು ಗಲಾಟೆ ಮಾಡಬೇಡಿ ಅಂತ ಹೇಳಿ.. ನಮ್ಮ ಹುಡುಗರಿಗೆ ನಾಳೆನೆ ಎಲ್ಲಿಂದಲಾದ್ರೂ ಎರಡು ಟ್ರಾಕ್ಟರ್ ಕಲ್ಲು ತಂದು ಹಾಕಿ ಕೊಡಕೆ ಹೇಳ್ತಿನಿ.. ಅವರೇ ಹೆಂಗಾದ್ರೂ ಮಾಡಿ ಜನ ಹೊಂದಿಸ್ಗಂಡು ಕಲ್ಲು ಕಟ್ಟಿಕೊಳ್ಳಿ..... ನಾನ್ ಆ ಕಡೆ ಬರದಿಲ್ಲ ಅಂದ. ಅವನಾದ್ರೂ ಯಾವ ಮುಖ ಬಿಟ್ಕಂಡ್ ರೈತರ ಮುಂದೆ ಬಂದಾನು ಎಂದಿದ್ದ ಕೆಂಚೇಗೌಡ.

ಮರುದಿನ ರಾತ್ರಿ ಹೊನ್ನಮ್ಮ ಮಗ ಬರುವುದನ್ನೇ ಕಾಯುತ್ತಾ ಕುಳಿತಿದ್ದಳು.